**Anti Land-Grabbing Action Committee**

# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

**No. 759, 5th Main, 8th Cross, R.T.Nagar, II Block, Bangalore 560032 Ph: 094481 20305**
**Website : http://savekarnataka.in email: karnatakasave@gmail.com**

---

**ದಿನಾಂಕ: 09.12.2016**

ಗೆ,
ಸನ್ಮಾನ್ಯ ಶ್ರೀ ಸಿಧ್ಧರಾಮಯ್ಯನವರು,
ಗೌರವಾನ್ವಿತ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಭೂಕಬಳಿಕೆ ಪ್ರಕರಣಗಳ ವಿರುದ್ಧ ಕ್ರಮ ಜರುಗಿಸದಿರುವ ಬಗ್ಗೆ ಹಾಗೂ 'ನೈಸ್' ಸಂಸ್ಥೆಯ ಅಕ್ರಮಗಳ ಬಗ್ಗೆ ಸದನ ಸಮಿತಿಯು ನೀಡಿರುವ ವರದಿಯ ಬಗ್ಗೆ

ಉಲ್ಲೇಖ: ಭೂಕಬಳಿಕೆ ಪ್ರಕರಣಗಳ ವಿರುದ್ಧ ಕ್ರಮ ಜರುಗಿಸಲು ತಮ್ಮನ್ನು ಮುಕ್ತವಾಗಿ ಬೇಟಿಯಾಗಿ ಒತ್ತಾಯಿಸಿರುವುದಲ್ಲದೆ ನಮ್ಮ ಸಮಿತಿಯು ತಮಗೆ ಬರೆದ 22.09.14, 21.10.14, 26.11.2014, 03.03.2015, 08.05.2015, 06.07.2015, 18.10.2015, 20.07.2016, 12.09.2016 ಪತ್ರಗಳು

ಉಲ್ಲೇಖದಲ್ಲಿ ತಿಳಿಸಿರುವಂತೆ ನಾವು ಈಗಾಗಲೇ ಹಲವಾರು ಬಾರಿ ಪತ್ರ ಬರೆದು ಹಾಗು ನೇರವಾಗಿ ತಮ್ಮನ್ನು ಬೇಟಿಯಾಗಿ ಭೂಕಬಳಿಕೆ ಪ್ರಕರಣಗಳ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿದ್ದೇವೆ. ಕರ್ನಾಟಕದಲ್ಲಿ ಸುಮಾರು 4 ಲಕ್ಷ ಕೋಟಿ ಬೆಲೆಬಾಳುವ 4 ಲಕ್ಷ ಎಕರೆ ಸರ್ಕಾರಿ ಭೂಮಿಗೆ ಅಧಿಕಾರಿಗಳ ಸಹಯೋಗದೊಂದಿಗೆ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಪ್ರಭಾವಿಗಳು ಭೂಕಬಳಿಕೆ ಮಾಡಿದ್ದಾರೆ ಎನ್ನುವ ಗಂಭೀರವಾದ ವಿಷಯವು ತಮಗೂ ತಿಳಿದಿದೆ. ಕರ್ನಾಟಕ ರಾಜ್ಯದಲ್ಲಿ ಕಬಳಿಸಿರುವ ಸರ್ಕಾರಿ ಭೂಮಿಯ ಮೊತ್ತವು ನೋಟು ರದ್ದತಿಯಿಂದ ಇಡೀ ದೇಶದಿಂದ ಬರಬಹುದಾದ 3.5 ಲಕ್ಷ ಕೋಟಿ ಕಪ್ಪು ಹಣದ ಮೊತ್ತಕ್ಕಿಂತ ಮಿಗಿಲಾಗಿರುತ್ತದೆ. ಸರ್ಕಾರ ಮತ್ತು ಇಲಾಖೆಗಳು ಸರಕಾರಿ ಭೂಮಿಯನ್ನು ರಕ್ಷಿಸುವಲ್ಲಿ ವಿಫಲರಾಗಿರುತ್ತಾರೆ. ಹೋರಾಟಗಾರರ ಒತ್ತಾಯದಿಂದ ಭೂಕಬಳಿಕೆ ನಿಷೇದ ಕಾಯ್ದೆ ಜಾರಿಗೆ ಬಂದಿದ್ದು, ತಡವಾಗಿಯಾದರೂ ವಿಶೇಷ ನ್ಯಾಯಾಲಯ ಸ್ಥಾಪಿಸಿರುವುದು ಸ್ವಾಗತಾರ್ಹವಾದರೂ, ಅದರಿಂದ ನಿರೀಕ್ಷಿತ ಪರಿಣಾಮವಾಗದಿರುವುದು ವಿಷಾಧನೀಯ. 2007ರಲ್ಲಿ ಜಂಟಿ ಸದನ ಸಮಿತಿಗೆ ಮಾಹಿತಿ ಒದಗಿಸಿದ ಇಲಾಖೆಗಳಲ್ಲಿ ಭೂಕಬಳಿಕೆ ಪ್ರಕರಣಗಳ ಮಾಹಿತಿ ಇದ್ದರೂ, ಪ್ರಭಾವಿ ಭೂಗಳ್ಳರ ವಿರುದ್ಧ ಹಾಗೂ ಅವರೊಂದಿಗೆ ಸಹಕರಿಸಿದ ಅಧಿಕಾರಿಗಳ ವಿರುದ್ಧ ಇದುವರೆವಿಗೂ ಯಾವುದೇ ಕ್ರಮಗಳಾಗಿರುವುದಿಲ್ಲ. ವಿಶೇಷ ನ್ಯಾಯಾಲಯ ಸ್ಥಾಪನೆಯಾದನಂತರ ಇತರೆ ನ್ಯಾಯಾಲಯಗಳಲ್ಲಿದ್ದ ಭೂಕಬಳಿಕೆ ಪ್ರಕರಣಗಳು ಈ ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆಯಾಗಬೇಕಿತ್ತು. ಇದರ ಬಗ್ಗೆಯೂ ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಈಗ ವಿಶೇಷ ನ್ಯಾಯಾಲಯದಲ್ಲಿರುವ ಪ್ರಕರಣಗಳು ಹೋರಾಟಗಾರರು ಅಥವಾ ಜನಸಾಮಾನ್ಯರು ದೂರು ನೀಡಿ ದಾಖಲಿಸಿದ ಪ್ರಕರಣಗಳಾಗಿವೆ. ಇದನ್ನು ಗಮನಿಸಿದರೆ, ಸರ್ಕಾರ ಎಲ್ಲಾ ಭೂಕಬಳಿಕೆ ಪ್ರಕರಣಗಳನ್ನು ಜನರೇ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಬೇಕೆಂಬ ತಪ್ಪು ಸಂದೇಶ ಕೊಡುತ್ತಿದೆ ಎಂಬ ಅಭಿಪ್ರಾಯ ಮೂಡುತ್ತದೆ. ಹಾಗಾದರೆ ಸರ್ಕಾರಿ ಭೂಮಿ ಕಾಪಾಡುವಲ್ಲಿ ಸರ್ಕಾರಿ ಇಲಾಖೆಗಳ/ಸಂಸ್ಥೆಗಳ ಹೊಣೆಗಾರಿಕೆ ಇಲ್ಲವೇ? ಆದ್ದರಿಂದ ಈಗಲಾದರೂ ಈ ಅತ್ಯಂತ ಗಂಭೀರ ವಿಷಯದ ಬಗ್ಗೆ ಸರಿಯಾದ ಕ್ರಮಗಳನ್ನು ಜರುಗಿಸಲು ಒತ್ತಾಯಿಸುವ ಮತ್ತೊಂದು ಪ್ರಯತ್ನ ಇದಾಗಿದೆ. ಕ್ರಿಮಿನಲ್ ಸ್ವರೂಪದ ಭೂಕಬಳಿಕೆ ಪ್ರಕರಣಗಲ್ಲಿ ತೊಡಗಿದ/ತೊಡಗುತ್ತಿರುವ ಪ್ರಭಾವಿ ಭೂಗಳ್ಳರು ಹಾಗೂ ಭ್ರಷ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವ ಬದ್ಧತೆ ತೋರಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇವೆ.

ಇನ್ನೊಂದು ಪ್ರಮುಖವಾಗಿ ಗಮನಸೆಳೆಯಬೇಕಾದ ವಿಷಯವೆಂದರೆ 'ನೈಸ್' ಸಂಸ್ಥೆಯ ಅಕ್ರಮಗಳ ಬಗ್ಗೆ ಸದನ ಸಮಿತಿಯು ನೀಡಿರುವ ವರದಿಯ ಬಗ್ಗೆ. ಸನ್ಮಾನ್ಯ ಶ್ರೀ. ಟಿ. ಬಿ. ಜಯಚಂದ್ರ ಅವರ ನೇತೃತ್ವದ ಜಂಟಿ ಸದನ ಸಮಿತಿ ತಯಾರಿಸಿದ ನೈಸ್ ಅಕ್ರಮಗಳ ವರದಿಯನ್ನು ಸದನದಲ್ಲಿ ಮಂಡಿಸಿದ ರೀತಿಯನ್ನು ಗಮನಿಸಿದರೆ, ಈ ವಿಷಯದ ಬಗ್ಗೆ ಸರ್ಕಾರದ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿತ್ತು. ಸಮಿತಿಯ ನೇತೃತ್ವ ವಹಿಸಿದವರು ಸ್ವತಃ ಸರ್ಕಾರದ ಕಾನೂನು ಸಚಿವರೇ ಆಗಿರುತ್ತಾರೆ. ಅವರ ನೇತೃತ್ವದಲ್ಲಿ ನೀಡಿದ ವರದಿಯನ್ನು ಪರಿಶೀಲಿಸಲು ಅಧಿಕಾರಿಗಳ ಸಮಿತಿಗೆ ವಹಿಸಿರುವುದು ತಿಳಿದು ಬಂದಿದೆ. ಸದನ ಸಮಿತಿಯ ವರದಿಯಲ್ಲಿ ಸಿಬಿಐ, ಜಾರಿ ನಿರ್ದೇಶನಾಲಯ ಅಥವಾ ಕೇಂದ್ರ ವಿಚಕ್ಷಣಾ ಆಯೋಗದಿಂದ ಹೆಚ್ಚಿನ ತನಿಖೆ ನಡೆಸಬೇಕೆಂದು ಶಿಫಾರಸ್ಸು ಮಾಡಿರುತ್ತದೆ. ಹೀಗಿರುವಾಗ, ಈ ಸದನ ಸಮಿತಿಯ ವರದಿಯನ್ನು ಪರಾಮರ್ಶಿಸಲು ಮುಖ್ಯ ಕಾರ್ಯದರ್ಶಿಗಳ ಅಧ್ಯಕತೆಯ ಉನ್ನತ ಮಟ್ಟದ ಸಮಿತಿಗೆ ವಹಿಸಿರುವುದು ಅತ್ಯಂತ ವಿಷಾದನೀಯ. ಸದನ ಸಮಿತಿಯು ಶಾಸಕಾಂಗದ ಒಂದು ಪ್ರತಿಬಿಂಬವಾಗಿರುತ್ತದೆ. ಕಾರ್ಯಾಂಗದ ಯಾವುದೇ ಮಟ್ಟದ ಅಧಿಕಾರಿಗಳ ಸಮಿತಿಯು ಸದನ ಸಮಿತಿಗಿಂತ ಉನ್ನತ ಮಟ್ಟದ್ದಾಗಿರುವುದಿಲ್ಲ. ಸರ್ಕಾರದ ಈ ನಿರ್ಧಾರ ಸಂವಿಧಾನಕ್ಕೆ ವಿರುದ್ಧವಾಗಿದ್ದು ಶಾಸಕಾಂಗದ ಹಕ್ಕುಚ್ಯುತಿಯಾಗುತ್ತದೆ. ಅಧಿಕಾರಿಗಳ ಸಮಿತಿಯನ್ನು ಸದನ ಸಮಿತಿಗಿಂತಲೂ ಉತ್ಕೃಷ್ಟ ಎನ್ನುವಂತೆ ಉದ್ಧಟತನದಿಂದ ನಿರ್ಧಾರ ತೆಗೆದುಕೊಂಡಿರುವುದು ಶಾಸಕಾಂಗಕ್ಕೆ ಅಗೌರವ ತೋರಿದಂತಾಗಿದೆ ಹಾಗೂ ವಿಧಾನ ಸಭೆಗೆ ಅಪಮಾನವೆಸಗಿದಂತಾಗಿದೆ. ಸದನ ಸಮಿತಿ ನೀಡಿರುವ ವರದಿಯನ್ನು ಅಧಿಕಾರಿಗಳು ಪರಿಶೀಲಿಸುವುದಾದರೆ, ಸದನ ಸಮಿತಿಯನ್ನು ರಚಿಸುವ ಉದ್ದೇಶವೇನು? ವ್ಯರ್ಥವಾಗಿ ಸದನ ಸಮಿತಿಗೆ ಸಾರ್ವಜನಿಕರ ಹಣ ಪೋಲು ಮಾಡಿದಂತಾಗಿದೆ. ಯಾವುದೇ ಸದನ ಸಮಿತಿಯ ವರದಿಯನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಸರ್ಕಾರಕ್ಕೆ/ಮಂತ್ರಿ ಮಂಡಲಕ್ಕೆ ಇರುತ್ತದೆ. ಅಧಿಕಾರಿಗಳ ಸಮಿತಿಯು ಮಂತ್ರಿ ಮಂಡಲಕ್ಕಿಂತ ಹೆಚ್ಚಿನ ಅಧಿಕಾರ ಹೊಂದಿದೆ ಎನ್ನುವುದು ಪ್ರಜಾಪ್ರಭುತ್ವದ ಅಪಹಾಸ್ಯವಾಗಿದೆ. ವರದಿಯಲ್ಲಿ ತಿಳಿಸಿರುವಂತೆ ಸಿಬಿಐ, ಜಾರಿ ನಿರ್ದೇಶನಾಲಯ ಅಥವಾ ಕೇಂದ್ರ ವಿಚಕ್ಷಣಾ ಆಯೋಗದ ತನಿಖೆಗೆ ಒಪ್ಪಿಸುವುದನ್ನು ತಪ್ಪಿಸಲು ಸರ್ಕಾರ ಹುನ್ನಾರ ನಡೆಸಿದೆ. ಇದು ಕೇವಲ ಅಕ್ರಮಗಳಲ್ಲಿ ಭಾಗಿಯಾಗಿರುವವರನ್ನು ರಕ್ಷಿಸಲು ಮಾಡಿರುವ ನಿರ್ಧಾರ ಎಂಬುದು ಎದ್ದು ಕಾಣುತ್ತದೆ. ನೈಸ್ ಯೋಜನೆಯಲ್ಲಿ ನಡೆಸಿರುವ ಅವ್ಯವಹಾರಗಳ ವಿರುದ್ಧ ಕ್ರಮ ಜರುಗಿಸುವ ಯಾವುದೇ ಇಚ್ಛೆ ಸರ್ಕಾರಕ್ಕೆ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ಗಂಭೀರವಾದ ವಿಷಯದ ಬಗ್ಗೆ ಸೂಕ್ತ ಗಮನ ಹರಿಸಿ , ಸದನ ಸಮಿತಿ ನೀಡಿರುವ ವರದಿಯನ್ನು ಉನ್ನತ ಮಟ್ಟದ ಅಧಿಕಾರಿಗಳ ಸಮಿತಿಯಿಂದ ಪರಿಶೀಲನೆಗೆ ಒಳಪಡಿಸುವ ನಿರ್ಧಾರವನ್ನು ಕೈಬಿಟ್ಟು , ತಕ್ಷಣ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ ಹೆಚ್ಚಿನ ತನಿಖೆಗೆ ಒಪ್ಪಿಸಬೇಕೆಂದು ಒತ್ತಾಯಿಸುತ್ತೇವೆ.

ಮೇಲೆ ತಿಳಿಸಿರುವ ಎರಡೂ ವಿಷಯಗಳ ಬಗ್ಗೆ ಕೂಡಲೇ ಗಮನಹರಿಸಿ ನಿರೀಕ್ಷಿತ ಕ್ರಮಗಳನ್ನು ತೆಗೆದುಕೊಳ್ಳುತ್ತೀರೆಂದು ನಂಬಿದ್ದೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಎ. ಟಿ. ರಾಮಸ್ವಾಮಿ.

(ಎ.ಟಿ.ರಾಮಸ್ವಾಮಿ)
ಸಂಚಾಲಕರು

ಯಥಾ ನಕಲನ್ನು ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ:

1. ಶ್ರೀ. ಕಾಗೋಡು ತಿಮ್ಮಪ್ಪ ನವರು, ಸನ್ಮಾನ್ಯ ಕಂದಾಯ ಸಚಿವರು, ವಿಧಾನ ಸೌಧ, ಬೆಂಗಳೂರು - ತಮ್ಮ ಇಲಾಖೆಯಲ್ಲಿರುವ ಸರ್ಕಾರಿ ಭೂಕಬಳಿಕೆ ಪ್ರಕರಣಗಳ ಮಾಹಿತಿಯನ್ನು ವಿಶೇಷ ನ್ಯಾಯಾಲಯಕ್ಕೆ ಒದಗಿಸಿ ಭೂಗಳ್ಳರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು

ಒತ್ತಾಯಿಸುತ್ತೇವೆ. ಮಂತ್ರಿ ಮಂಡಲದಲ್ಲಿ ಅತ್ಯಂತ ಹಿರಿಯ ಸಚಿವರಾದ ತಾವು, ಸದನ ಸಮಿತಿ ನೀಡಿರುವ ವರದಿಯನ್ನು ಪರಿಶೀಲಿಸಲು ಅಧಿಕಾರಿಗಳ ಸಮಿತಿಯನ್ನು ರಚಿಸುವ ಸರ್ಕಾರದ ನಿರ್ಧಾರವನ್ನು ಹಿಂಪಡೆಯುವಂತೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲಹೆ ನೀಡಲು ಕೋರುತ್ತೇವೆ.

2. ಶ್ರೀ. ಟಿ.ಬಿ.ಜಯಚಂದ್ರ, ಸನ್ಮಾನ್ಯ ಕಾನೂನು ಸಚಿವರು, ವಿಧಾನ ಸೌಧ, ಬೆಂಗಳೂರು - ಸರ್ಕಾರದ ಈ ನಿರ್ಧಾರ ಶಾಸಕಾಂಗದ ಹಕ್ಕುಚ್ಯುತಿಯಾಗುವುದರಿಂದ, ಇದನ್ನು ಕೊಡಲೇ ಹಿಂಪಡೆಯಲು ಕ್ರಮ ತೆಗೆದುಕೊಳ್ಳಲು ಒತ್ತಾಯಿಸುತ್ತೇವೆ .

3. ಶ್ರೀ ಎಸ್. ಸಿ. ಕುಂಟಿಯ, ಐಎಎಸ್ , ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು - ಸರ್ಕಾರದ ನಿರ್ಧಾರದಂತೆ ಇವರು ಉನ್ನತ ಮಟ್ಟದ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿಕೊಂಡು, ಸದನ ಸಮಿತಿ ನೀಡಿರುವ ವರದಿಯನ್ನು ಪರಿಶೀಲಿಸಲು ಮುಂದಾದರೆ , ಅವರ ವಿರುದ್ಧ ಶಾಸಕಾಂಗದ ಹಕ್ಕುಚ್ಯುತಿ ದೂರು ನೀಡಲಾಗುವುದು ಎಂದು ತಿಳಿಸಲು ಬಯಸುತ್ತೇವೆ.